ದೇವರ ರಾಜ್ಯದ

# ಶುಭವಾರ್ತೆ

"ಎಲ್ಲವನ್ನೂ ಪರಿಶೋಧಿಸಿ ಒಳ್ಳೆಯದನ್ನೆ ಭದ್ರವಾಗಿ ಹಿಡಿದುಕೊಳ್ಳಿರಿ"
(1 ಥೆಸಲೋನಿಕ 5:21)

ಕ್ರಿಸ್ತಡೆಲ್ಫಿಯನ್ನರ ಸತ್ಯವೇದದ ಸತ್ಯಪ್ರಚಾರ ಪತ್ರಿಕೆ

53

# ಇಕ್ಕಟ್ಟಾದ ಮಾರ್ಗ

ದೇವರಿಗೆ ಮೆಚ್ಚಿಕೆಯಾದ ಒಂದು ರೀತಿಯ ಆರಾಧನೆಗೂ ಆತನಿಗೆ ಮೆಚ್ಚಿಕೆಯಾಗದ ಒಂದು ರೀತಿಯ ಆರಾಧನೆಗೂ ವ್ಯತ್ಯಾಸವನ್ನು ಸತ್ಯವೇದದಲ್ಲೆಲ್ಲಾ ನೋಡಬಹುದಾಗಿದೆ. ಈ ವ್ಯತ್ಯಾಸದ ಹಿಂದಿರುವ ನೀತಿಯನ್ನು ಆದಿಕಾಂಡ 4ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ; ಅದನ್ನು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ನಮಗೆ ವಿವರಣೆ ನೀಡಲಾಗಿದೆ. ಹೇಬೇಲನು "ತನ್ನ ಹಿಂಡಿನ ಚೊಚ್ಚಲ ಕುರಿಗಳನ್ನು" ಅರ್ಪಿಸಿದನು, ಅವನ ಆರಾಧನೆಯು ದೇವರಿಗೆ ಮೆಚ್ಚಿಗೆಯಾಯಿತು; ಕಾಯಿನನು "ಹೊಲದ ಬೆಳೆಯಲ್ಲಿ ಕೆಲವನ್ನು" ತಂದು ಅರ್ಪಿಸಿದನು; ಅವನ ಆರಾಧನೆಯು ದೇವರಿಗೆ ಮೆಚ್ಚಿಕೆಯಾಗಲಿಲ್ಲ. (ಆದಿಕಾಂಡ 4:3-5).

"ನಂಬಿಕೆಯಿಂದಲೇ ಹೇಬೇಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು" (ಇಬ್ರಿಯ 11:4). ಒಬ್ಬ ಮನುಷ್ಯನು ತಾನು ಮಾಡುತ್ತಿರುವುದು ಸರಿಯಾದುದೆಂಬ ನಂಬಿಕೆಯಿರುವ ತನಕ ಅದು ದೇವರಿಗೆ ಮೆಚ್ಚಿಕೆಯಾಗಿರುತ್ತದೆಂದು ಇದರ ಅರ್ಥವಲ್ಲ. ಯಾಕೆಂದರೆ ನಿಜವಾದ ನಂಬಿಕೆಯೆಂದರೆ ದೇವರು ಏನು ಹೇಳಿದ್ದಾನೋ ಅದರಂತೆ ಮಾಡುವುದೆಂದರ್ಥ—ಇಬ್ರಿಯರಿಗೆ ಬರೆದ ಪತ್ರಿಕೆಯ 11ನೇ ಅಧ್ಯಾಯವನ್ನು ಎಚ್ಚರಿಕೆಯಿಂದ ಓದಿದಾಗ ಅದು ಸಾಕಷ್ಟು ವಿವರವನ್ನು ನೀಡುತ್ತದೆ. ಹಾಗಿದ್ದಲ್ಲಿ, ದೇವರು ಪ್ರಾರಂಭದಿಂದಲೇ ತನ್ನನ್ನು ಹೇಗೆ ಆರಾಧಿಸಬೇಕೆಂಬ ನಿಯಮಗಳಲ್ಲಿ ಮೊದಲೇ ಮಾನವನಿಗೆ ತಿಳಿಸಿರಲೇಬೇಕು. ಎಂದು ನಾವು ನಿಶ್ಚೈಸಬಹುದು. ದೇವರು ಏನು ಹೇಳಿದ್ದನೆಂದು ಹೇಬೇಲನಿಗೆ ತಿಳಿದಿತ್ತು (ಯಾಕೆಂದರೆ ಮೊದಲು ದೇವರ ವಾಕ್ಯ ಏನು ಹೇಳುತ್ತದೆಂಬ ತಿಳುವಳಿಕೆಯಿಲ್ಲದೆ, ಅದರಲ್ಲಿ ನಂಬಿಕೆಯಿರುವುದಿಲ್ಲ), ದೇವರು ಹೇಳಿದ್ದನ್ನು ನಂಬಿದನು; ಮತ್ತು ಅದರ ಪ್ರಕಾರ ನಡೆದನು. ಕಾಯಿನನು ದೇವರು ಏನು ಹೇಳಿದ್ದನೆಂದು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ ಇಲ್ಲವೇ ಅದನ್ನು ಕಡೆಗಾಣಿಸಲು ಇಚ್ಚಿಸಿರಬಹುದು. ತನಗೆ ಸೂಕ್ತವೆಂದು ತೋರಿದ ರೀತಿಯಲ್ಲಿ ಆರಾಧಿಸಿದನು.

ಹೀಗೆ, ನಿಯಮವೇನೆಂದರೆ, ಸರಿಯಾದ ನಂಬಿಕೆಯಿಂದ ಮೆಚ್ಚಿಗೆಯಾದ ಆರಾಧನೆಯು ಹೊಮ್ಮುತ್ತದೆ; ತಪ್ಪಾದ ನಂಬಿಕೆಯಿಂದ ಮೆಚ್ಚಿಗೆಯಾಗದ ಆರಾಧನೆಯಲ್ಲಿ ಕೊನೆಗೊಳ್ಳುತ್ತದೆ. ಹೇಬೇಲನ ಪ್ರಕರಣದಲ್ಲಿ, ಹಿಂಡಿನ ಒಂದು ಪ್ರಾಣಿಯನ್ನು ಅವನು ಅರ್ಪಿಸಿದ್ದರಲ್ಲಿ, ದೇವರ ಉದ್ದಿಶ್ಯದಲ್ಲಿ ಪಾಪದ ಕ್ಷಮೆಗೆ ರಕ್ತಧಾರೆಯು ಅಗತ್ಯವೆಂಬ ನೀತಿಯನ್ನು ಅಂಗೀಕರಿಸಲಾಗಿದೆ. ಕಾಯಿನನು,

ಹೊಲದ ಬೆಳೆಯನ್ನು ಅರ್ಪಿಸುವಲ್ಲಿ ಈ ನೀತಿಯನ್ನು ಸ್ಪಷ್ಟವಾಗಿ ನಂಬಿರಲಿಲ್ಲ. ಇದು ಮೆಚ್ಚುಗೆಯಾದ ಆರಾಧನೆಗೂ ಸರಿಯಾದ ನಂಬಿಕೆಗೂ ಇರುವ ಸಂಬಂಧವನ್ನು ಚಿತ್ರಿಸುತ್ತದೆ.

## ಎರಡು ಮಾರ್ಗಗಳು

ಕರ್ತನಾದ ಯೇಸುಕ್ರಿಸ್ತನು ಎರಡು ಮಾರ್ಗಗಳಿರುವುದಾಗಿ ಹೇಳಿದನು ; ನಾಶನಕ್ಕೆ ಕೊಂಡೊಯ್ಯುವ ಅಗಲವಾದ ಮಾರ್ಗ—ಅನೇಕರು ಇಳಿದು ಹೋಗುವ ಮಾರ್ಗ ; ಮತ್ತು ಒಂದು ಇಕ್ಕಟ್ಟಾದ ಮಾರ್ಗ—ಕೆಲವೇ ಜನರು ಹಿಂಬಾಲಿಸುವ ಮಾರ್ಗ (ಮತ್ತಾಯ 7:13-14). ಈ ಎರಡು ಮಾರ್ಗಗಳು ಕಾಯಿನ ಮತ್ತು ಹೇಬೇಲನ ಕಾಲದಿಂದಲೂ ಅಸ್ತಿತ್ವದಲ್ಲಿರುತ್ತವೆ. "ಕಾಯಿನನ ಮಾರ್ಗ"ವನ್ನು ಅನುಸರಿಸಿದವರೂ ಇದ್ದರು, ಅವರು ಜಲಪ್ರಳಯದಲ್ಲಿ ನಾಶವಾದರು ; ಸರಿಯಾದ ಮಾರ್ಗವನ್ನು ಹಿಂಬಾಲಿಸಿದ "ದೇವರೊಂದಿಗೆ ನಡೆದ" ಹನೋಕನಂತಹವರೂ ಇದ್ದರು (ಆದಿಕಾಂಡ 5:24). ಜಲಪ್ರಳಯ ಬಂದಾಗ ಆ ಮಾರ್ಗವನ್ನು ಇನ್ನೂ ಹಿಂಬಾಲಿಸುತ್ತಿದ್ದ ಎಂಟು ಮಂದಿಯ ಒಂದು ಸಣ್ಣ ಗುಂಪು ಉಳಿದಿತ್ತು. ಅವರ ಜೀವಗಳನ್ನು ನಾವೆಯಲ್ಲಿ ರಕ್ಷಿಸಲಾಗಿತ್ತು.

ಜಲಪ್ರಳಯದ ನಂತರ ಅದೇ ರೀತಿಯ ವಿಭಜನೆಯಾಗಿದ್ದಿರಬಹುದು ; ಯಾಕೆಂದರೆ ದೇವರು ಅಬ್ರಹಾಮನನ್ನು ಕಲ್ದೀಯರ ಊರ್ ಪಟ್ಟಣದಿಂದ ಕರೆದು, ಒಂದು ಹೊಸ ಪ್ರಾರಂಭವನ್ನು ಸ್ಥಾಪಿಸುವ ಅಗತ್ಯವುಂಟಾಗಿತ್ತು. ಅಬ್ರಹಾಮನ ಜೀವಿತದ ಸಂಪೂರ್ಣ ಸಂದರ್ಭ ಏನಾಗಿತ್ತೆಂದರೆ ಅವನ ಸುತ್ತಲಿದ್ದ ವಿಗ್ರಹಾರಾಧಕ ಹಾಗೂ ದುಷ್ಟ ಜನರಿಂದ ಪ್ರತ್ಯೇಕಿಸಲ್ಪಡಬೇಕಾಗಿತ್ತು ; ನಿಶ್ಚಯವಾಗಿಯೂ, ಅವನು ವಿಗ್ರಹಾರಾಧಕರ ಹಿನ್ನೆಲೆಯಿಂದ ಬಂದಿದ್ದನು, ಯಾಕೆಂದರೆ ಅವನ ತಂದೆ ತೆರಹನು "ಅನ್ಯ ದೇವರುಗಳನ್ನು" ಪೂಜಿಸುತ್ತಿದ್ದನೆಂದು ನಮಗೆ ತಿಳಿಸಿದೆ. (ಯೆಹೋಶುವ 24:2). ಪಾಪದಿಂದ ಶುದ್ಧೀಕರಿಸಿದ ಭೂಮಿಯ ಮೇಲೆ ನೋಹನು ಮತ್ತು ಅವನ ಕುಟುಂಬವು ಕಾಲಿಟ್ಟ ಕಾಲದಿಂದ ಅಬ್ರಹಾಮನು ವಿಗ್ರಹಾರಾಧಕ ಊರ್ ಪಟ್ಟಣದಿಂದ ಹೊರಡುವವರೆಗೆ, ಆದಾಮನು ಪಾಪ ಮಾಡಿದ ನಂತರ ನಡೆದ ವಿಭಜನೆಯ ತರಹವೇ ಮತ್ತೊಂದು ವಿಭಜನೆಯಾಯಿತು—ದೇವರು ಹೇಳಿದ್ದನ್ನು ನಂಬಿ ಅದರಂತೆ ಆರಾಧಿಸಿದವರಿಗೂ ಮತ್ತು ತಮ್ಮ ಸ್ವಂತ ಮಾರ್ಗಗಳನ್ನು ಅನುಸರಿಸಲು ಇಚ್ಛೆಪಟ್ಟವರಿಗೂ ಮಧ್ಯೆ ವಿಭಜನೆಯಾಯಿತು.

ಆದರೆ ಕಾಯಿನ ಮತ್ತು ಹೇಬಲರಲ್ಲಿ ಆದಾಮನು ಪಾಪ ಮಾಡಿದ ನಂತರ ನಡೆದ ವಿಭಜನೆಯಂತೆ ಈ ವಿಭಜನೆ ಯಾವ ಕಾಲದಲ್ಲಾಯಿತೆಂದು ಸತ್ಯವೇದದಲ್ಲಿ

ಸ್ಪಷ್ಟವಾಗಿರುವುದಿಲ್ಲ. ಬಾಬೆಲ್ ಗೋಪುರವನ್ನು ಕಟ್ಟುವಾಗ ದೇವರಿಗೆ ವಿರುದ್ಧವಾಗಿ ಮಾನವನು ತನ್ನನ್ನು ಹೆಚ್ಚಿಸಿಕೊಳ್ಳುವುದೆಂಬುದಾಗಿ ದೇವರು ಪರಿಗಣಿಸಿದ್ದನು; ಅದರಂತೆಯೇ ಅದರ ಬಗ್ಗೆ ದೇವರು ನಡೆದುಕೊಂಡನು. ದೇವರ ವಾಕ್ಯಕ್ಕೆ ವಿರುದ್ಧವಾದ ಅನೇಕ ನಂಬಿಕೆಗಳನ್ನು ಆಚರಣೆಗಳನ್ನು ಸಾಂಪ್ರದಾಯಿಕವಾಗಿ ಪ್ರೇರೆಪಿಸಿದವನು ನಿಮ್ರೋದನು, ಅನೇಕ ವಿಷಯಗಳು ಅವನ ಹೆಸರಿಗೆ ಹಚ್ಚಿಕೊಂಡಿದ್ದರೂ, ಸತ್ಯವೇದವು ಅವುಗಳ ಬಗ್ಗೆ ಮೌನವಾಗಿದೆ. ಆದರೆ ಆದಿಕಾಂಡ **10:8-10** ರಲ್ಲಿನ ಅರ್ಥವು ಅವನು ತನ್ನನ್ನು ದೇವರಿಗೆ ವಿರುದ್ಧವಾಗಿ ಹೆಚ್ಚಿಸಿಕೊಂಡಿದ್ದಾನೆ ಎಂಬುದಾಗಿದೆ.

ಭ್ರಷ್ಟ ಕ್ರೈಸ್ತ ಮತದ ಸುಳ್ಳು ಸಿದ್ಧಾಂತಗಳನ್ನು ಈ ಪ್ರಾಚೀನ ಕಾಲಕ್ಕೆ ಗುರುತಿಸಬಹುದಾಗಿದೆ. ಆತ್ಮದ ಅಮರತ್ವದಲ್ಲಿ ನಂಬಿಕೆ, ತ್ರಯೈಕತ್ವದ ದೇವರುಗಳಲ್ಲಿ ನಂಬಿಕೆ, ಕೆಡುಕಿನ ದೇವರು ಮತ್ತು ಒಳ್ಳೆಯವರ ದೇವರುಗಳಲ್ಲಿ ನಂಬಿಕೆ, ಮಹಾ ಮಾತೆ ದೇವತೆಯಲ್ಲಿ ನಂಬಿಕೆ—ಈ ಎಲ್ಲಾ ಸುಳ್ಳು ಸಿದ್ಧಾಂತಗಳೂ ಹಾಗೂ ಇತರೇ ಅನೇಕ ಸುಳ್ಳು ಸಿದ್ಧಾಂತಗಳು ಪ್ರಾಚೀನ ಬಾಬಿಲೋನಿಯನ್ನರು ಹಾಗೂ ಐಗುಪ್ತ್ಯದವರಿಂದ ಬಂದವುಗಳಾಗಿವೆ. ಈ ನಂಬಿಕೆಗಳು ಜಲಪ್ರಳಯದ ಕಾಲದ ಹಾಗೂ ಅಬ್ರಹಾಮನ ಕರೆಯುವಿಕೆಯ ಕಾಲದ ಮಧ್ಯೆ ಬೆಳೆಯಿತು.

ಅಬ್ರಹಾಮನು ಒಂದು ಹೊಸ ಪ್ರಾರಂಭಕ್ಕೆ ಆರಿಸಲ್ಪಟ್ಟ ಒಬ್ಬನಾಗಿದ್ದನೆಂಬುದು ನಮ್ಮ ವಿಷಯ ವಸ್ತುವಿಗೆ ಸರಿಯಾದುದಾಗಿದೆ (ನಿಜವಾದ ಆರಾಧನೆಯು ದೇವರ ವಾಕ್ಯದಲ್ಲಿ ನಂಬಿಕೆಯಿದ್ದು, ಅದು ಹೇಳುವಂತೆ ಆಗಿರುತ್ತದೆ); ಯಾಕೆಂದರೆ ಹಳೇ ಒಡಂಬಡಿಕೆಯಲ್ಲಿನ ಯೋಗ್ಯರಲ್ಲಿ ಒಬ್ಬ ಅತ್ಯುನ್ನತ ನಂಬಿಗಸ್ತ ಮನುಷ್ಯನಾಗಿ ಅವನು ನಿಲ್ಲುತ್ತಾನೆ. ಅವನು ಊರ್ ಪಟ್ಟಣವನ್ನು ಬಿಡಲು ಸಿದ್ಧತೆ ನಡೆಸುವಲ್ಲಿಯೂ, ಪ್ರವಾಸಿಯಂತೆ ಬದುಕಿರುವಲ್ಲಿಯೂ, ದೇವರ ರಾಜ್ಯದಲ್ಲಿ ಒಂದು ಶಾಶ್ವತ ಸ್ವಾಸ್ತ್ಯವನ್ನು ಎದುರು ನೋಡುವಲ್ಲಿಯೂ ಅವನ ನಂಬಿಕೆಯನ್ನು ನಾವು ಕಾಣುತ್ತೇವೆ. ಅವನಿಗೂ ಸಾರಳಿಗೂ ಹುಟ್ಟಬೇಕಿದ್ದ ವಾಗ್ದಾನದ ಸಂತತಿಯ ಸಂಬಂಧದಲ್ಲಿ ಅವನ ನಂಬಿಕೆಯನ್ನು ನಾವು ನೋಡುತ್ತೇವೆ. ಆರಾಧನೆಯ ಬಗ್ಗೆ ದೇವರ ಆಜ್ಞೆಗಳಿಗೆ ವಿಧೇಯನಾಗುವಲ್ಲಿ ಸಹ ಅವನು ನಂಬಿಕೆಯನ್ನು ತೋರಿಸಿದನು. "....ಅಬ್ರಹಾಮನು ನನ್ನ ಮಾತನ್ನು ಕೇಳಿ ನಾನು ಹೇಳಿದಂತೆ ಮಾಡಿ, ನನ್ನ ಆಜ್ಞಾವಿಧಿಗಳನ್ನು ಕೈಕೊಂಡು ನಡೆದದರಿಂದ...." (ಆದಿಕಾಂಡ 26:4). ಅವನು ಯಜ್ಞವೇದಿಗಳನ್ನು ಕಟ್ಟಿ ಬಲಿಗಳನ್ನು ಅರ್ಪಿಸಿದನೆಂದು ನಾವು ತಿಳಿದಿದ್ದೇವೆ. (ಆದಿಕಾಂಡ **12:7; 15:9**); ಹಾಗೆ ಮಾಡುವಲ್ಲಿ ಅವನು ದೇವರು ಆಜ್ಞಾಪಿಸಿ

ದಂತೆ ನಡೆಯಲು ಎಚ್ಚರವಹಿಸಿದ್ದನೆಂದು ನಾವು ತಿಳಿಯಬಹುದು. ನಾವು ಅಬ್ರಹಾಮನ ಜೀವಿತವನ್ನು ನೋಡಿದಲ್ಲಿ, ಅವನು ಕಾನಾನ್ ದೇಶದ ಜನರ ಆರಾಧನೆಯಿಂದ ತನ್ನನ್ನು ಪ್ರತ್ಯೇಕಿಸಿಕೊಂಡಿದ್ದನೆಂದು ಗಮನಿಸಬಹುದಾಗಿದೆ. ನಿಜವಾದ ನಂಬಿಕೆಯುಳ್ಳ ಜನಶೇಷದ ಪ್ರತಿನಿಧಿಯಾದ ಮೆಲ್ಕಿಜೆದಕನನ್ನು ಮಾತ್ರ ಭೇಟಿಯಾಗಿದ್ದನು. ಕಾನಾನ್ ದೇಶದ ವಿಗ್ರಹಾರಾಧಕರೊಂದಿಗೆ ಯಾವುದೇ ರೀತಿಯ ಸಹಭಾಗಿತ್ವ ಮಾಡುವಂತಿಲ್ಲ. ಇಸ್ರಾಯೇಲ್ಯರು ಅನೇಕ ವರ್ಷಗಳ ನಂತರ ಆ ದೇಶದ ಮೇಲೆ ಧಾಳಿ ನಡೆಸುವಾಗ ದುಷ್ಟರಾಗಿದ್ದಷ್ಟು ಅವರು ಆಗ ದುಷ್ಟರಾಗಿರಲಿಲ್ಲ. "ಅಮೋರಿಯರ ಅಪರಾಧವು ಇನ್ನೂ ಪೂರ್ಣ ಸ್ಥಿತಿಗೆ ಬರಲಿಲ್ಲ" (ಆದಿಕಾಂಡ 15:16).

## ಇಸ್ರಾಯೇಲ್ಯರ ಪ್ರತ್ಯೇಕತೆ

ವಾಗ್ದಾನಗಳ ನೆರವೇರುವಿಕೆಯಿಂದಾಗಿ ಅಬ್ರಹಾಮನ ವಂಶಸ್ಥರು ಇಸಾಕ ಮತ್ತು ಯಾಕೋಬರ ಮೂಲಕ ಒಂದು ದೊಡ್ಡ ಜನಾಂಗವಾದಾಗ, ಮತ್ತೆ ಅಲ್ಲಿ ಪ್ರತ್ಯೇಕತೆ ಉಂಟಾಯಿತು. ಇಸ್ರಾಯೇಲ್ಯರು "ನಿಮ್ಮ ದೇವರಾದ ಯೆಹೋವನಿಗೆ ಮೀಸಲಾದ ಜನಾಂಗ"ವೆಂದು ಘೋಷಿಸಲಾಗಿತ್ತು. ಅದೇ ಸಂದರ್ಭದಲ್ಲಿ ಕಾನಾನ್ ದೇಶದ ವಾಸಿಗಳೊಂದಿಗೆ ಯಾವುದೇ ರೀತಿಯ ಸಂಬಂಧವಿರಕೂಡದೆಂಬ ನಿರ್ಬಂಧವನ್ನು ವಿಧಿಸಲಾಗಿತ್ತು. ವಿಶೇಷವಾಗಿ ಅವರ ಅಸತ್ಯ ಆರಾಧನೆ ಮಾಡಕೂಡದೆಂದು ತಿಳಿಸಲಾಗಿತ್ತು. "ನೀವು ಅವರನ್ನು ನಿಮ್ಮಿಂದ ಪರಾಜಯ ಪಡಿಸುವಾಗ ನೀವು ಅವರನ್ನು ನಿಶ್ಶೇಷವಾಗಿ ಸಂಹರಿಸಬೇಕು. ಅವರ ಸಂಗಡ ಒಡಂಬಡಿಕೆ ಮಾಡಿಕೊಳ್ಳಬಾರದು, ಅವರನ್ನು ಕನಿಕರಿಸಬಾರದು, ಅವರೊಡನೆ ಬೀಗತನ ಮಾಡಬಾರದು : ಅವರ ಮಕ್ಕಳಿಗೆ ಹೆಣ್ಣುಗಳನ್ನು ಕೊಡಲೂಬಾರದು, ಅವರಿಂದ ತರಲೂಬಾರದು. ಹಾಗೆ ಮಾಡಿದರೆ ಅವರು ನಿಮ್ಮ ಮಕ್ಕಳನ್ನು ಯೆಹೋವನ ಸೇವೆಯಿಂದ ತಪ್ಪಿಸಿ ಇತರ ದೇವರುಗಳನ್ನು ಪೂಜಿಸುವುದಕ್ಕೆ ತಿರುಗಿಸಾರು ; ಆಗ ಯೆಹೋವನು ನಿಮ್ಮ ಮೇಲೆ ಕೋಪಗೊಂಡು ಬೇಗನೆ ನಿಮ್ಮನ್ನು ನಾಶಮಾಡುವನು. ಆದುದರಿಂದ ನೀವು ಹೀಗೆ ಮಾಡಬೇಕು—ಅವರ ಬಲಿಪೀಠಗಳನ್ನು ಕೆಡವಬೇಕು : ಅವರ ಕಲ್ಲಿನ ಕಂಬಗಳನ್ನು ಒಡೆದು ಅಶೇರವೆಂಬ ವಿಗ್ರಹ ಸ್ತಂಭಗಳನ್ನು ಕಡಿದು ಅವರ ದೇವತಾ ಪ್ರತಿಮೆಗಳನ್ನು ಬೆಂಕಿಯಿಂದ ಸುಟ್ಟು ಬಿಡಬೇಕು". (ಧ.ಕಾ. 7:2–5). ಇಸ್ರಾಯೇಲ್ಯರು ದೇವರನ್ನು ಹೇಗೆ ಆರಾಧಿಸಬೇಕೆಂದು ಮೋಶೆಯ ಧರ್ಮಶಾಸ್ತ್ರದಲ್ಲಿ ಅನೇಕ ವಿವರವಾದ ಆಜ್ಞೆಗಳನ್ನು ಕೊಡಲ್ಪಟ್ಟಿತ್ತು. ಧರ್ಮಶಾಸ್ತ್ರದಂತೆ ನಡೆಯುವುದರಿಂದ ಯಾರೂ ರಕ್ಷಣೆ ಹೊಂದಲಾರರು, ಯಾಕೆಂದರೆ

ಯಾರೂ ಅದನ್ನು ಪರಿಪೂರ್ಣವಾಗಿ ಪಾಲಿಸಲಾಗುವುದಿಲ್ಲ; ಆದರೆ ಅಂದಿನ ಇಸ್ರಾಯೇಲ್ಯರಲ್ಲಿ ಅನೇಕ ನಂಬಿಗಸ್ತ ಸ್ತ್ರೀ ಪುರುಷರಿದ್ದರು; ಅಂಥಹವರಿಗೆ ನಾವು ಮೇಲೆ ತಿಳಿಸಿದ ನಿಯಮವು ಅನ್ವಯವಾಗುತ್ತಿತ್ತು. ಅವರು ದೇವರ ನ್ಯಾಯ ಪ್ರಮಾಣವನ್ನು ಓದಿದ್ದು, ಅದಕ್ಕೆ ವಿಧೇಯರಾಗಲು ಪ್ರಯತ್ನಿಸಿ, ಅವರ ವಿಧೇಯತೆಯು ಅವರ ಕಾಣಿಕೆ ಹಾಗೂ ಪಾಪದ ಬಲಿಗಳಲ್ಲಿ ಸೇರಿದ್ದು, ಸರ್ವದೋಷ ಪರಿಹಾರಕ ದಿನ (Day of Atonement) ದಲ್ಲಿ ಭಾಗಿಗಳಾಗಿದ್ದರು.

ಇಸ್ರಾಯೇಲ್ಯರ ಚರಿತ್ರೆಯಲ್ಲಿ ತರುವಾಯ ಧರ್ಮಶಾಸ್ತ್ರದಲ್ಲಿ ತಿಳಿಸಿರುವ ಆರಾಧನೆಯನ್ನು ಅಸತ್ಯ ದೇವತೆಗಳ ಆರಾಧನೆಯೊಂದಿಗೆ ಕೂಡಿಸಲು ಕೆಲವರು ಪ್ರಯತ್ನಿಸಿದರು. ಪ್ರವಾದಿಗಳು ಇದನ್ನು ಮಾಡಿದವರನ್ನು ತೀವ್ರವಾಗಿ ಖಂಡಿಸಿದರು. ಪ್ರವಾದಿಯಾದ ಯೆರೆಮೀಯನು ದೇವರನ್ನು ಆರಾಧಿಸಲು ದೇವಾಲಯದ ದ್ವಾರಗಳನ್ನು ಪ್ರವೇಶಿಸಿ, ನಂತರ ಇತರ ದೇವತೆಗಳನ್ನು ಹಿಂಬಾಲಿಸಿದಂತವರ ಬಗ್ಗೆ ಹೇಳುತ್ತಾನೆ (ಯೆರೆಮೀಯ 7:1-7). ಜೆಫನ್ಯನು ಬಹಿರಂಗವಾಗಿ ವಿಗ್ರಹಗಳನ್ನು ಆರಾಧಿಸುವವರನ್ನು ಮಾತ್ರ ಖಂಡಿಸದೆ, ಅವುಗಳೊಂದಿಗೆ ಒಡಂಬಡಿಕೆ ಮಾಡುವವರನ್ನು ಖಂಡಿಸುತ್ತಾನೆ. "ಮಾಳಿಗೆಗಳ ಮೇಲೆ ಆಕಾಶದ ನಕ್ಷತ್ರಗಣಕ್ಕೆ ಪೂಜಿಸುವವರನ್ನು ಯೆಹೋವನ ಭಕ್ತರೆಂದು ಪ್ರತಿಜ್ಞೆ ಮಾಡಿಕೊಂಡು ಆರಾಧಿಸಿ ಮಲ್ಕಾಮನ ಮೇಲೆ ಆಣೆಯಿಡುವವರನ್ನೂ........ಧ್ವಂಸಪಡಿಸುವೆನು." (ಜೆಫನ್ಯ 1:5)

ಸೆರೆಯಿಂದ ತಿರಿಗಿ ಬಂದ ಯೆಹೂದ್ಯರು ತಮ್ಮ ದೇಶಕ್ಕೆ ಹಿಂದಿರುಗಿ, ದೇವಾಲಯವನ್ನು ಪುನಃ ಕಟ್ಟುವದಕ್ಕೆ ಪ್ರಾರಂಭಿಸಿದಾಗ, ಅಶ್ಶೂರದವರು ಮೆಸಪೊಟಾಮ್ಯದಿಂದ ಸಮಾರ್ಯಕ್ಕೆ ಸಾಗಕಳುಹಿಸಿದ ಸಮಾರ್ಯರು, "ನಿಮ್ಮೊಡನೆ ಕಟ್ಟುವದಕ್ಕೆ ನಮಗೂ ಅಪ್ಪಣೆಯಾಗಲಿ; ಯಾಕೆಂದರೆ ನಿಮ್ಮಂತೆ ನಾವೂ ನಿಮ್ಮ ದೇವರ ಭಕ್ತರಾಗಿದ್ದೇವೆ; ನಮ್ಮನ್ನು ಇಲ್ಲಿ ತಂದಿರಿಸಿದ ಅಶ್ಶೂರದ ಅರಸನಾದ ಏಸರ್ಹದ್ದೋನನ ಕಾಲದಿಂದ ನಾವು ಆತನಿಗೇ ಯಜ್ಞಾರ್ಪಣೆ ಮಾಡುತ್ತಾ ಬಂದಿದ್ದೇವೆ" ಎಂದು ಹೇಳಿದರು (ಎಜ್ರ 4:2). ಇಸ್ರಾಯೇಲಿನ ಪ್ರಧಾನರ ಪ್ರತಿಕ್ರಿಯೆ ಹೀಗಿತ್ತು; "ನೀವು ನಮ್ಮ ದೇವರ ಆಲಯವನ್ನು ಕಟ್ಟುವದರಲ್ಲಿ ನಮ್ಮೊಡನೆ ಸೇರಲೇಕೂಡದು." (ವ.3). ಸಮಾರ್ಯದವರು, "ಯೆಹೋವನ ಭಕ್ತರಾಗಿದ್ದರೂ ತಾವು ಬಿಟ್ಟು ಬಂದ ದೇಶಗಳ ಪದ್ಧತಿಯ ಪ್ರಕಾರ ತಮ್ಮ ಕುಲ ದೇವತೆಗಳ ಆರಾಧನೆಯನ್ನೂ ಮಾಡುತ್ತಿದ್ದರು." (2 ಅರಸು 17:33). ದೇವರ ಆರಾಧನೆಯೊಂದಿಗೆ ವಿಗ್ರಹಾರಾಧನೆಯನ್ನು ಕೂಡಿಸಿ ಕೊಂಡಿದ್ದ ಜನರೊಂದಿಗೆ ಯೆಹೂದ್ಯರು ಆರಾಧಿಸುವುದು ಸಾಧ್ಯವಾಗಿರಲಿಲ್ಲ. ಸತ್ಯದ ಮೂಲಾಂಶಗಳನ್ನು ಹಿಡಿದುಕೊಂಡಿದ್ದು ಅದಕ್ಕೆ ಅಸತ್ಯ ನಂಬಿಕೆಗಳನ್ನು ಕೂಡಿಸಿಕೊಂಡಿರುವಂತಹವರೊಂದಿಗೆ

**ಆರಾಧನೆ ನಡೆಸುವುದು ಸ್ವೀಕೃತವಾದದ್ದೆಂದು ವಾದಿಸುವ ಇಂದಿನ ಅನೇಕರು ಬೋಧಾರತವನ್ನು ನಿಷ್ಫಲಗೊಳಿಸುವ ಸತ್ಯವೇದದ ಒಂದು ಉದಾಹರಣೆ ಇಲ್ಲಿದೆ.**

**ಹೊಸ ಒಡಂಬಡಿಕೆಯ ಬೋಧನೆ :**

ಸತ್ಯ ಅಸತ್ಯವಾದವುಗಳ ನಡುವೆ ಇದೇ ರೀತಿಯ ಪ್ರತ್ಯೇಕತೆಯ ವಿಷಯ ವಸ್ತುವನ್ನು ನೋಡಬಹುದು. "ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗ ಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು ? ಬೆಳಕಿಗೂ ಕತ್ತಲೆಗೂ ಐಕ್ಯವೇನು ? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು ? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು ? ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು ? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ....ಆದುದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ ; ಅಶುದ್ಧವಾದ ಯಾವುದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ...." (2 ಕೊರಿಂಥ 6:14-18). "....ನಾವು ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತ ಯೇಸುವಿನವ ಸೃಷ್ಟಿಸಲ್ಪಟ್ಟೆವು...." (ಎಫೆಸ 2). ಹೊಸ ಒಡಂಬಡಿಕೆಯ ಈ ಭಾಗಗಳು ಈ ಪ್ರತ್ಯೇಕತೆಯ ಬಗ್ಗೆ ಸ್ಪಷ್ಟವಾಗಿ ತಿಳಿಸುತ್ತವೆ. ಹೊಸ ಒಡಂಬಡಿಕೆಯ ಕೊನೆಯ ಪುಸ್ತಕಗಳಲ್ಲಿ ಕ್ಷುದ್ರ ಧರ್ಮದ ಅಸತ್ಯ ಕಲ್ಪನೆಗಳು ಸಭೆಗಳೊಳಗೆ ನುಸುಳಿರುವುದು ಸ್ಪಷ್ಟವಾಗಿರುತ್ತದೆ. ಆ ಸಭೆಗಳವರು ತಮ್ಮ ಮಧ್ಯದಲ್ಲಿನ ತಪ್ಪುಗಳ ಬಗ್ಗೆ ತೀವ್ರತರವಾದ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ. ಅದನ್ನು ಬೋಧಿಸುವವರನ್ನು ಸಭೆಯಿಂದ ಹೊರಗೆ ಹಾಕುವುದೂ ಸಹ ಸೇರಿದೆ. ಆದರೆ ಹೊಸ ಒಡಂಬಡಿಕೆಯ ಕಾಲದಲ್ಲಿ ಸಂಗತಿಗಳು ಅಷ್ಟೊಂದು ಕೆಟ್ಟದಾಗಿದ್ದು, ಅಸತ್ಯವು ಹರಡಿದ್ದರಿಂದ ಸತ್ಯವನ್ನು ಹಿಡಿದವರು ತಮ್ಮ ಆರಾಧನೆಯಲ್ಲಿ ತಮ್ಮನ್ನು ಪ್ರತ್ಯೇಕಿಸಿಕೊಂಡದ್ದನ್ನು ನಾವು ನೋಡುವುದಿಲ್ಲ. ಆ ಹಂತವು ಹೊಸ ಒಡಂಬಡಿಕೆಯ ಕಾಲದ ನಂತರ ಬಂದಿತು.

ಪ್ರಕಟಣೆ ಪುಸ್ತಕದಲ್ಲಿ ಎರಡು ವರ್ಗಗಳ ಮಧ್ಯೆ ಸ್ಪಷ್ಟವಾದ ವ್ಯತ್ಯಾಸವಿದೆ : ತಮ್ಮ ಹಣೆಯ ಮೇಲೆ ದೇವರ ಮುದ್ರೆ ಹಾಕಿಸಿಕೊಂಡವರು, ಅಂದರೆ ತಮ್ಮ ಮನಸ್ಸಿನಲ್ಲಿ ಸತ್ಯವನ್ನು ಇಟ್ಟುಕೊಂಡಿರುವವರು ; ಹಾಗೂ ತಮ್ಮ ಹಣೆಯ ಮೇಲೆ ಮೃಗದ ಗುರುತನ್ನು ಹೊಂದಿರುವವರು. (ಪ್ರಕಟಣೆ 7:3 ; 13:16 ; 14:1). ಹಳೇ ಒಡಂಬಡಿಕೆಯ ಕಾಲದಲ್ಲಿದ್ದಂತೆ ಸ್ಫುಟವಾದ ಅದೇ ವಿಭಜನೆ ಇರುವುದನ್ನು ನೋಡುತ್ತೇವೆ. ಕ್ರಿಸ್ಟಡೆಲ್ಫಿಯನ್ನರು ಪ್ರಕಟಣೆ ಗ್ರಂಥವನ್ನು ಅರ್ಥ ಮಾಡಿಕೊಂಡಿರುವ ಹಾಗೆ ಮೃಗದ ಗುರುತನ್ನು ಹಾಕಿಸಿಕೊಂಡಿರುವವರು ಯಾರೆಂದರೆ, ಕ್ಷುದ್ರಧರ್ಮದ ನಂಬಿಕೆಗಳಿಂದ ಆಚಾರಗಳಿಂದ, ಕಲುಷಿತಗೊಂಡ ಕ್ರೈಸ್ತತ್ವದಲ್ಲಿ ನಂಬಿಕೆಯಿಟ್ಟಿರುವವರು.

ಸ್ವೇಚ್ಛಾಸ್ಥಿತಿಯೇನೆಂದರೆ, ನಮ್ಮ ಸುತ್ತಲಿನ ಸಭೆಗಳವರ ನಂಬಿಕೆಗಳು ಕ್ಷುದ್ರ ಧರ್ಮದ (Pagan) ನಂಬಿಕೆಗಳಿಂದ ತೀವ್ರವಾಗಿ ಕಲಕ್ಕಿಹೋಗಿದೆ. ಅನೇಕರು ಕ್ಷುದ್ರಧರ್ಮದ ಕಲ್ಪನೆಯಾದ ಆತ್ಮದ ಅಮರತ್ವದಲ್ಲಿ ನಂಬಿಕೆಯಿಟ್ಟಿದ್ದಾರೆ. ಅನೇಕರು ಕೆಡುಕಿನ ಒಬ್ಬ ದೇವರಲ್ಲಿ—ಸೈತಾನನಲ್ಲಿ ನಂಬಿಕೆಯಿಟ್ಟಿದ್ದಾರೆ. ಮತ್ತೆ ಯಾವುದೋ ರೂಪದಲ್ಲಿ ಅಮರತ್ವವುಳ್ಳ ಒಬ್ಬನು ಹಿಂದೆ ಇದ್ದು, ಮತ್ತೆ ಮಾನವ ರೂಪವನ್ನು ಧರಿಸಿ, ತನ್ನನ್ನು ನಮ್ಮ ಬದಲಿಗೆ ಅರ್ಪಿಸಿಕೊಂಡನೆಂಬ ನಂಬಿಕೆಯು ಸಾಮಾನ್ಯವಾದುದಾಗಿದೆ. ಮಾನವನ ಮನಸ್ಸು ಮತ್ತು ಇಡಕೆಯು ಮೇಲೆ ದೇವರ ವಾಕ್ಯಕ್ಕೂ ಪೂರ್ವಭಾವಿಯಾಗಿ ಪರಿಣಾಮವನ್ನುಂಟು ಮಾಡದ ಪರಲೋಕದಿಂದ ಬರುವುದೆಂಬ ಒಂದು ಪ್ರಭಾವದಲ್ಲಿ ಅನೇಕರು ನಂಬಿಕೆ ಯನ್ನಿಟ್ಟಿರುತ್ತಾರೆ.

ನಾವು ಮೂಲ ತತ್ವಗಳೆಂದು ನಂಬಿರುವ ಸತ್ಯವೇದದ ಸಿದ್ಧಾಂತಗಳು ಪರಸ್ಪರ ಸಂಬಂಧಿತವಾದವುಗಳಾಗಿವೆ. ಆದ್ದರಿಂದ ಅವೆಲ್ಲವೂ ಪ್ರಾಮುಖ್ಯ ವಾದವುಗಳಾಗಿವೆ. ಇತರರೊಂದಿಗೆ ಆರಾಧಿಸುವ ಸಲುವಾಗಿ ಇವುಗಳಲ್ಲಿ ಯಾವೊಂದ ರಲ್ಲಿಯೂ ನಾವು ರಾಜಿಯಾಗಲು ಸಾಧ್ಯವಿಲ್ಲ. ಒಬ್ಬನೇ ಸತ್ಯದೇವರ ಆರಾಧನೆಯು ಕ್ಷುದ್ರಧರ್ಮದೊಂದಿಗೆ ಬೆರೆಯುವುದು ಹಳೇ ಒಡಂಬಡಿಕೆಯ ಕಾಲದಲ್ಲಿ ಸಮ್ಮತ ವಾದುದಾಗಿರಲಿಲ್ಲ : ಈಗಲೂ ಸಹ ಸಮ್ಮತವಾದುದಲ್ಲ. ಯಾಕೆಂದರೆ, ದೇವರು ತನ್ನ ಮಾರ್ಗಗಳನ್ನು ಬದಲಿಸುವುದಿಲ್ಲ. ನಾವು ಮೇಲೆ ಹೇಳಿದಂತೆ ಕ್ರೈಸ್ತ ಸಭೆಗಳು ಹಾಗೂ ಪಂಗಡಗಳು ತಮ್ಮ ನಂಬಿಕೆಯಲ್ಲಿ ಅರೆ–ಕ್ಷುದ್ರ ಧರ್ಮಿಗಳಾಗಿದ್ದಾರೆ.

ಆದಿಯಿಂದಲೂ ಸ್ವೀಕೃತವಾದ ಆರಾಧನೆಗೆ ಆಧಾರ ದೇವರ ವಾಕ್ಯದಲ್ಲಿ ನಂಬಿಕೆಯೇ ಆಗಿದೆ. ಹಾಗೂ ಅದು ಏನು ಹೇಳುತ್ತದೋ ಅದರಂತೆ ನಡೆಯುವು ದಾಗಿದೆ. ಈ ಆಧಾರದ ಮೇಲೆ ಯಾರು ಆರಾಧಿಸಿದರೋ ಅವರು ತಮ್ಮ ನಂಬಿಕೆ ಗಳಿಗೆ ಮಾನವನ ಆಲೋಚನೆಗಳನ್ನು ಕೂಡಿಸಿದವರಿಂದ ಪ್ರತ್ಯೇಕವಾಗಿ ಉಳಿದಿದ್ದರು. ಪ್ರೇರಿತರಾದರೆನ್ನಲಾದ ನಾಯಕರ ಅಧಿಕಾರವನ್ನು ಹೇರುವುದು, ಇಲ್ಲವೇ ದೇವರ ವಾಕ್ಯಕ್ಕೂ ಪೂರ್ವಭಾವಿಯಾಗಿ ಆತ್ಮದಿಂದ ವೈಯಕ್ತಿಕವಾಗಿ ನಡೆಸಲ್ಪಟ್ಟವ ರೆನ್ನಲಾದವರ ಆಲೋಚನೆಗಳನ್ನು ಅನೇಕರು ಅನುಸರಿಸುವುದು ವಿಷಾದಕರವಾಗಿದೆ. ಆದಾಗ್ಯೂ ಅದು ಅವರ ಸ್ಥಿತಿಯಾಗಿದೆ. ವಾಸ್ತವಿಕತೆಗೆ ನಾವು ಕುರುಡರಾಗ ಬಾರದು. ತಪ್ಪು ನಂಬಿಕೆಯಲ್ಲಿರುವವರೊಂದಿಗೆ ಆರಾಧಿಸಬಹುದೆಂದು ಪ್ರಾಮುಖ್ಯವಾದ ಸೈದ್ಧಾಂತಿಕ ವ್ಯತ್ಯಾಸಗಳನ್ನು ತೇಪೆ ಹಾಕುವುದರಿಂದ ಅವರಿಗೆ ನಾವು ಏನೂ ಸಹಾಯ ಮಾಡಿದಂತಾಗುವುದಿಲ್ಲ. ಆದರೆ ಹಾಗೆ ಮಾಡುವುದರಿಂದ ಸತ್ಯಕ್ಕೂ ನಮಗೂ ಹೇಳಲಾಗದ ಕೇಡನ್ನುಂಟುಮಾಡಿದಂತಾಗುತ್ತದೆ. ಕ್ರಿಸ್ಟಡೆಲ್ಫಿಯನ್ನರ ಹಿಂದಿನ ತಲೆಮಾರಿನವರು ಈ ವಿಷಯಗಳಲ್ಲಿ ಹೊಂದಿದ್ದ

ಬಲಯುತವಾದ ಮನೋಭಾವಕ್ಕೆ ಇಂದು ನಾವು ಹಿಂದಿರುಗುವುದು ಅಗತ್ಯವಾಗಿದೆ.

ಇಂಗ್ಲಿಷಿನಲ್ಲಿ ಒಂದು ಸಂಗೀತ (266) ಹೀಗಿದೆ.

"ಮೂಲತತ್ವದಲ್ಲಿ ಶುದ್ಧವಾಗಿರು,
ವಾಕ್ಯದಲ್ಲಿ ಬಲವಾಗಿರು,
ಇಬ್ಬಾಯಿ ಕತ್ತಿಯನ್ನು
ಅದರ ಹೊಳಪಿನಲ್ಲಿ ಜೋಪಾನ ಮಾಡು,
ದೇವರ ರಾಜ್ಯದ ವಿಷಯಗಳು
ಕ್ರಿಸ್ತನ ಹೆಸರಿನ ವಿಷಯಗಳು
ಯೆಹೋವನಲ್ಲಿ ಅರಿಕೆ ಮಾಡಿದಲ್ಲಿ
ಅವಮಾನದಿಂದ ನಮ್ಮನ್ನು ಮುಕ್ತ ಮಾಡುತ್ತಾನೆ".

—ಭಾ. ಚಂದುದಾಸ್

# ನನ್ನನ್ನು ಕ್ರಯಕ್ಕೆ ಕೊಂಡ ಕರ್ತನು-2

"ನಿಮಗೂ ತಿಳಿದಿರುವ ಪ್ರಕಾರ ದೇವರು ನಿಮ್ಮ ಮಧ್ಯದಲ್ಲಿ ಅವನ ಮುಖಾಂತರವಾಗಿ ನಡಿಸಿದ ಬಲವಾದ ಕ್ರಿಯೆಗಳಿಂದಲೂ, ಅದ್ಭುತಗಳಿಂದಲೂ, ಲಕ್ಷಣಗಳಿಂದಲೂ ದೇವರು ನಮಗೆ ತೋರಿಸಿದ (ತನಗೆ ಮೆಚ್ಚಿಕೆಯಾದ) ಮನುಷ್ಯನಾದ ನಜರೇತಿನ ಯೇಸುವನ್ನೇ, ದೇವರ ನಿಶ್ಚಯವಾದ ಚಿತ್ತ ಮುಂತಿಳುವಳಿಕೆಗಳಿಂದ ಒಪ್ಪಿಸಲ್ಪಟ್ಟವನಾಗಿ, ನೀವು ಹಿಡಿದು, ಅನ್ಯಾಯವಾದ ಕೈಗಳಿಂದ ಮೊಳೆ ಜಡಿದು, ಕೊಂದು ಹಾಕಿದಿರಿ". (ಅ. ಕೃ. 2:22-23 ಹ. ಭಾ). "ಅವರು ನೀತಿವಂತರೆಂದು ನಿರ್ಣಯ ಹೊಂದುವುದು ದೇವರ ಉಚಿತಾರ್ಥವಾದ ಕೃಪೆಯಿಂದಲೇ, ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವುದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಿರಬೇಕೆಂದು ಈತನನ್ನು ಮುಂದಿಟ್ಟನು". (ರೋಮಾ 3:24-25). "ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತುಕೊಂಡದ್ದೇ. ಅದೇನೆಂದರೆ ಶಾಸ್ತ್ರದಲ್ಲಿ (ಸತ್ಯವೇದದಲ್ಲಿ)

ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು". (1 ಕೊರಿಂಥ 15:3-4).

"ಇದೆಲ್ಲಾ ದೇವರಿಂದಲೇ ಉಂಟಾದದ್ದು. ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನ ಪಡಿಸಿಕೊಂಡು ಸಮಾಧಾನ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ. (2 ಕೊರಿಂಥ 5:18). "ಹೀಗೆ ಆತನು....ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿದನು...." (ಫಿಲಿಪ್ಪಿ 2:8-9). "ಆಗ ನಾನು (ಯೇಸುವು)--ಇಗೋ ದೇವರೇ ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ. (ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ) ಎಂದು ಹೇಳಿದನು....ಯೇಸುಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆ ಮಾಡಿ ದೇವರ ಚಿತ್ತವನ್ನು ನೆರವೇರಿಸಿದುದರಿಂದಲೇ ನಾವು ಶುದ್ಧರಾದೆವು". (ಇಬ್ರಿಯ 10:7-10).

ಹಿಂದಿನ ಕಾಲದ ಬಲಿಗಳು, ಅವಶ್ಯವಾದ ಪಾಠಗಳನ್ನು ಕಲಿಸುತ್ತಾ, ಅರ್ಪಿಸುವವನ ಪಶ್ಚಾತ್ತಾಪ ಹಾಗೂ ದೇವರೊಂದಿಗೆ ಅವನ ಅನ್ಯೋನ್ಯತೆಯನ್ನು ಕಾರ್ಯರೂಪದ ನಿರೂಪಣೆಗೆ ಅವಕಾಶವಿತ್ತಿದ್ದರೂ, ಒಂದು ಅವಶ್ಯಕವಾದುದರಲ್ಲಿ ಕೊರತೆ ಹೊಂದಿತ್ತು. ಅರ್ಪಿಸುವವನಿಗೂ ಅವನ ಬಲಿಗೂ ವಾಸ್ತವವಾಗಿ ಯಾವುದೇ ಸಂಬಂಧವಿರಲಿಲ್ಲ; ಅದಕ್ಕಿಂತ ಮುಖ್ಯವಾಗಿ ಆ ಬಲಿಯು ಪಾಪವನ್ನು ನಿವಾರಿಸುತ್ತಿರಲಿಲ್ಲ. ಈ ಕಾರಣದಿಂದಾಗಿಯೇ, ಬಲಿಗಳನ್ನು ಮತ್ತೆ ಮತ್ತೆ ಪುನರಾವರ್ತನೆ ಮಾಡಲಾಗುತ್ತಿತ್ತು; ಮತ್ತು ಪಾಪವನ್ನು ಜ್ಞಾಪಕ ಮಾಡಲಾಗುತ್ತಿದ್ದು, ಅದು ಎಂದಿಗೂ ನಿವಾರಣೆಯಾಗಲಿಲ್ಲ. ಈ ರೀತಿಯಾಗಿ ಮಾನವನ ಗತಿ ಹಾಗೂ ಅಗತ್ಯತೆಯನ್ನು ಒತ್ತಿ ಹೇಳಿ, ಸುಸ್ಪಷ್ಟವಾಗಿ ಮುಂದಿಡಲಾಗಿದೆ. ಈ ಬಲಿಗಳು ಮುಂದೆ ಇದಕ್ಕಿಂತಲೂ ಉತ್ತಮವಾದುದಕ್ಕೆ ಮಾನವನ ಪಾಪಗಳು ಕ್ಷಮಿಸಲ್ಪಡಲು ಏಕೈಕ ಮಾರ್ಗವನ್ನು ದೇವರು ಒದಗಿಸಿ ಕೊಡುವ ದಿನಕ್ಕೆ ಮುನ್ಸೂಚನೆಯಾಗಿದೆ:

"ಕ್ರಿಸ್ತನು....**ಸ್ವಂತ ರಕ್ತವನ್ನೇ** ತೆಗೆದುಕೊಂಡು **ನಿತ್ಯ ವಿಮೋಚನೆ** ಯನ್ನು ಸಂಪಾದಿಸಿಕೊಂಡವನಾಗಿ **ಒಂದೇ ಸಾರಿ** ಪರಿಶುದ್ಧ ಸ್ಥಳದೊಳಗೆ ಪ್ರವೇಶಿಸಿದನು". (ಇಬ್ರಿಯ 9:12).

"ಆದರೆ ಈ ಮನುಷ್ಯನು (ಯೇಸುವು) ಪಾಪ ನಿವಾರಣೆಗೋಸ್ಕರ **ನಿರಂತರವಾಗಿ** ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆ ಯಲ್ಲಿ ಕೂತುಕೊಂಡನು". (ಇಬ್ರಿಯ 10:12).

ಪ್ರಾಣಿ ಬಲಿಗಳಂತಿಲ್ಲದೆ, ಯೇಸುವು ತಾನು ಯಾರನ್ನು ರಕ್ಷಿಸಲು ಬಂದನೋ ಅವರೊಂದಿಗೆ ನೈಜ ಸಂಬಂಧವನ್ನು ಹೊಂದಿದ್ದನು. ದೇವರು ಆತನ ತಂದೆಯಾದರೂ, ಆತನು ನಮ್ಮಲ್ಲಿ ಒಬ್ಬನಾಗಿದ್ದನು. ಬಹಳ ಹಿಂದೆಯೇ ಹಳೇ ಒಡಂಬಡಿಕೆಯಲ್ಲಿ ಬರೆದಿರುವಂತೆ, ಆತನು ತನ್ನ ಸಹೋದರರಲ್ಲಿ ಒಬ್ಬನಾಗಿದ್ದನು. (ಧ. ಕಾ. 18:15). ಆ ಅರ್ಥದಲ್ಲಿ ಆತನು ಮಂದೆಯಲ್ಲಿಯ ಒಂದು ಕುರಿಯಾಗಿದ್ದನು. ಆದರೂ ಸಹ ಆತನು ನಮ್ಮಲ್ಲಿ ಒಬ್ಬನಂತೆ ವರ್ತಿಸಲಿಲ್ಲ, ಯಾಕಂದರೆ "ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು" (ಯೆಶಾಯ 53:6). ಆತನ ಬಗ್ಗೆ, "ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ". (1 ಪೇತ್ರ 2:22). ಆತನು ನಿಜವಾಗಿಯೂ ಯಾವ ಕುಂದೂ ಇಲ್ಲದ ಕುರಿಮರಿ ಹಾಗೂ ಪಾಪಿಗಳೊಳಗೆ ಪಾಪರಹಿತನಾಗಿದ್ದನು. ಅವನಲ್ಲಿ, ಅವನಲ್ಲಿ ಮಾತ್ರವೇ ದೇವರಿಗೂ ಮಾನವನಿಗೂ ಮಧ್ಯೆ ಒಂದು ಸೇತುವೆ ವಾಸ್ತವವಾಗಿ ಅಸ್ತಿತ್ವದಲ್ಲಿದೆ. ಪಾಪರಹಿತವಾಗಿರುವಲ್ಲಿ ಹಾಗೂ ವಿಮೋಚನೆಯ ಉದ್ದೇಶದಲ್ಲಿ ಆತನೂ ಆತನ ತಂದೆಯೂ ಒಂದಾಗಿದ್ದರು.

ಯೇಸುವಿನ ಮರಣವು ದೇವರ ನೀತಿಯ ಒಂದು ಪ್ರಕಟನೆಯಾಗಿತ್ತು. ಶಿಲುಬೆಯ ಮರದವರೆಗೂ ಕೊಂಡೊಯ್ಯುವಷ್ಟು ಯೇಸುವು ಶರೀರದ ಪಾಪದ ಸೆಳೆತವನ್ನು ನಿರಾಕರಿಸಿದನು. ಎಲ್ಲಾದಕ್ಕಿಂತಲೂ ಮಿಗಿಲಾಗಿ ತನ್ನ ತಂದೆಯ ಚಿತ್ತವನ್ನು ಉನ್ನತಕ್ಕೆ ಏರಿಸಿದನು. ಈ ಮೂಲಕವಾಗಿ ಆತನ ಮಗನ ರಕ್ತದಿಂದ ದೇವರಲ್ಲಿಗೆ ಒಂದು ಜೀವಿತ ಮಾರ್ಗವನ್ನು ಶಾಶ್ವತವಾಗಿ ತೆರೆಯಲಾಯಿತು. ನೀತಿವಂತ ಯೇಸುಕ್ರಿಸ್ತನಿಂದ ಮಾನವನ ಜೀವಿತವನ್ನು ಪರಿಪೂರ್ಣತೆಯಲ್ಲಿ ದೇವರಿಗೆ ಅರ್ಪಿಸಲಾಯಿತು.

> "ಹೀಗೆ ಪಾಪವು ಮರಣವನ್ನುಂಟು ಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯ ಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸುವುದು". (ರೋಮಾ 5:21).

ಯೇಸುವು ಮರಣ ಹೊಂದಿದ ಸ್ಥಳದ ಸಮೀಪ ಒಂದು ತೋಟವಿದ್ದು, ಅದರಲ್ಲಿ ಆವರೆಗೂ ಯಾರನ್ನೂ ಇಡದ ಬಂಡೆಯಲ್ಲಿ ಕೊರೆದ ಒಂದು ಹೊಸ ಸಮಾಧಿ ಇತ್ತು. ಕತ್ತಲಾಗುತ್ತಿದ್ದಂತೆ ಹಾಗೂ ಸಬ್ಬತ್ ದಿನ ಹತ್ತಿರವಾದಂತೆ ಈ ತನಕ ಯೇಸುವಿನ ಶಿಷ್ಯರೆಂದು ಹೊರಗೆ ತೋರ್ಪಡಿಸಿಕೊಂಡಿರದ ಇಬ್ಬರು ಮನುಷ್ಯರು, ಯೋಸೇಫ ಮತ್ತು ನಿಕೋದೇಮು ಎಂಬುವವರು ಈಗ ಆತನ

ಸ್ನೇಹಿತರೆಂದೂ ಹಿಂಬಾಲಕರೆಂದೂ ತಮ್ಮನ್ನು ತಾವೇ ಸ್ಪಷ್ಟವಾಗಿ ಪ್ರಕಟಿಸಿಕೊಂಡರು. ತಾವು ಪ್ರೀತಿಸಿದ ಕರ್ತನನ್ನು ಅವರು ಆತುರದಿಂದ ಗೌರವಯುತವಾಗಿ ಹೂಣಿಟ್ಟರು. ಅವರು ಆ ಸಮಾಧಿಯ ಬಾಯಿಗೆ ಒಂದು ದೊಡ್ಡ ಕಲ್ಲನ್ನು ಉರುಳಿಸಿ ಮುಚ್ಚಿದಾಗ, ಚರಿತ್ರೆಯ ಈ ಮಹಾ ಘಟನೆಯಲ್ಲಿ ತಾವು ಒಂದು ಸಣ್ಣ ಪಾತ್ರವನ್ನು ನಿರ್ವಹಿಸಿದ್ದಾಗಿ ಅವರಿಗೆ ತಿಳಿದಿರಲಿಲ್ಲ.

**ಖಾಲಿ ಸಮಾಧಿ**

ಆ ಹೊಸ ಸಮಾಧಿಯೊಳಗೆ ಸಂಪೂರ್ಣವಾಗಿ ಪಾಪರಹಿತನಾಗಿದ್ದ ಒಬ್ಬ ಮನುಷ್ಯನ ಶರೀರವು ಮಲಗಿತ್ತು. ಇತರ ಎಲ್ಲಾ ಮಾನವರ ಮೇಲೆ ಜಯ ಹೊಂದಿದಂತೆ ಮರಣವು ಈತನ ಮೇಲೂ ವಿಜಯವನ್ನು ಸಾಧಿಸಿದಂತಿತ್ತು. ಆದರೆ ತನ್ನ ರಕ್ತದಿಂದ ಶಾಶ್ವತ ಒಡಂಬಡಿಕೆಗೆ ಮುದ್ರೆ ಹಾಕಿದ ಈ ಮನುಷ್ಯನು ಒಂದು ಮಹತ್ತರ ಪ್ರಶ್ನೆಯ ಹೃದಯದಲ್ಲಿ ಅಡಗಿದ್ದನು. ಪಾಪಿಗಳಿಗೆ ಮರಣವಿದ್ದಲ್ಲಿ, ಒಬ್ಬ ನೀತಿವಂತನಾದ ಮನುಷ್ಯನನ್ನು ಅದು ಹೇಗೆ ಹಿಡಿದಿಟ್ಟೀತು ? ಒಡಂಬಡಿಕೆಯನ್ನೂ ಕೃಪೆಯನ್ನೂ ನೆರವೇರಿಸುವ ಹಾಗೂ ಆತನ ಮಾರ್ಗಗಳಲ್ಲಿ ಅನೀತಿಯಿಲ್ಲದ ದೇವರು, "ಶಾಶ್ವತವಾದ ಒಡಂಬಡಿಕೆಯನ್ನು ನಿಶ್ಚಯ ಪಡಿಸುವುದಕ್ಕಾಗಿ ತನ್ನ ರಕ್ತವನ್ನು ಸುರಿಸಿಕೊಂಡು ಸಭೆಯೆಂಬ ಹಿಂಡಿಗೆ ಮಹಾಪಾಲಕ(ಮಹಾ ಕುರುಬ)ನಾಗಿರುವ ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಬರಮಾಡಿದನು...." (ಇಬ್ರಿಯ 13:20). ಸತ್ಯವೇದದ ಬೇರೊಂದು ಭಾಗದಲ್ಲಿ ತಿಳಿಸಿರುವಂತೆ :

> "ಆತನನ್ನು ದೇವರು ಮರಣವೇದನೆಗಳಿಂದ ಬಿಡಿಸಿ ಎಬ್ಬಿಸಿದನು ; ಯಾಕಂದರೆ ಮರಣವು ಆತನನ್ನು ಹಿಡುಕೊಂಡಿರುವುದು ಅಸಾಧ್ಯವಾಗಿತ್ತು". (ಅ. ಕೃ. 2:22).

> "ಆತನು (ಕ್ರಿಸ್ತನು) ಪಾತಾಳದಲ್ಲಿ (ಸಮಾಧಿಯಲ್ಲಿ) ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನನುಭವಿಸುವುದಿಲ್ಲವೆಂತಲೂ....ಈ ಯೇಸುವನ್ನೇ ದೇವರು ಎಬ್ಬಿಸಿದನು". (ಅ.ಕೃ. 2:31-32).

> "ನಮ್ಮ ಕರ್ತನಾದ ಯೇಸುವನ್ನು....ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು". (ರೋಮಾ. 4:24-25).

ಪಾಪದಿಂದ ಕೂಡಿದ ಮಾನವನ ವಿಮೋಚನೆಯ ಕಾರ್ಯಗತಿಯಲ್ಲಿ ಕ್ರೂಜೆ ಹಾಗೂ ಪುನರುತ್ಥಾನವು ಒಳಗೊಂಡಿದೆ. ನಮ್ಮ ಹಾಗಿಲ್ಲದ ಯೇಸುವಿಗೆ

ಪಾಪದಿಂದ ವಿಮೋಚನೆಯು ಅಗತ್ಯವಿರಲಿಲ್ಲ; ಆದರೆ, ನಮ್ಮ ಹಾಗೆಯೇ ಆತನಿಗೆ ಮರಣದಿಂದ ರಕ್ಷಣೆಯು ಬೇಕಾಗಿತ್ತು; ಸತ್ಯವೇದದಲ್ಲಿ ತಿಳಿಸಿರುವಂತೆ ಇದನ್ನು ನೀಡಲಾಯಿತು.

"ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ (ಮಾಂಸದ ಶರೀರದಲ್ಲಿದ್ದಾಗ) ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯ ಭಕ್ತಿಯ ನಿಮಿತ್ತ ಕೇಳಲ್ಪಟ್ಟನು. ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ....ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣ(ಕರ್ತ)ನಾದನು" (ಇಬ್ರಿಯ 5:7-10).

ಕರ್ತನಾದ ಯೇಸುಕ್ರಿಸ್ತನು ನೂತನ ಪ್ರಾರಂಭಿಕೆಯ ಸ್ಥಾನವಾದನು, ಮಾನವ ಜನಾಂಗದ ನೂತನ ಅಧಿಪತಿ (ನಾಯಕ) ಯಾಗಿದ್ದಾನೆ. ಪ್ರಥಮ ಮಾನವನು ಪಾಪವನ್ನೂ ಮರಣವನ್ನೂ ತಂದನು; ಈ ನೂತನ ಮನುಷ್ಯನು ನೀತಿಯನ್ನೂ ನಿತ್ಯಜೀವವನ್ನೂ ತಂದನು. ಪ್ರಾಕೃತ ಜನ್ಮದಿಂದ ನಾವು ಆದಾಮನಿಗೆ ಸೇರಿದವರಾಗಿದ್ದೇವೆ: ನಿಜವಾದ ನಂಬಿಕೆಯಲ್ಲಿ ನಾವು ಹೊಸದಾಗಿ ಹುಟ್ಟಿದಾಗ, ನಾವು ಕ್ರಿಸ್ತನಿಗೆ ಸೇರಿದವರಾಗುತ್ತೇವೆ.

ನಮ್ಮ ಕರ್ತನಾದ ಯೇಸುಕ್ರಿಸ್ತನ ಮರಣ ಹಾಗೂ ಪುನರುತ್ಥಾನವು, ಬೆಳಕಿಗೆ ತಿರುಗಿದಾಗ ವಿವಿಧ ಉಜ್ವಲ ಪ್ರಭೆಯನ್ನು ಬೆಳಗಿಸುವ ಅಮೂಲ್ಯ ರತ್ನಗಳಂತೆ ಇವೆ. ಕ್ರಿಸ್ತನಲ್ಲಿ ದೇವರ ಪ್ರೀತಿಯುಳ್ಳ ಕಾರ್ಯವು ಸುವಾರ್ತೆಯ ಅಂತರಂಗದಲ್ಲಿ ಅಡಗಿದೆ; ಬೇರೆಲ್ಲವನ್ನೂ ಪಡೆಯಲು ಇದು ಸಾಧನವಾಗಿದೆ.

ಅಬ್ರಹಾಮ, ಇಸಾಕ ಮತ್ತು ಯಾಕೋಬ ಮತ್ತು ರಾಜನಾದ ದಾವೀದನಿಗೆ ಮಾಡಿದ ಅಮೂಲ್ಯವಾದ ವಾಗ್ದಾನಗಳ ನೆರವೇರುವಿಕೆಗೆ ಕ್ರಿಸ್ತನೇ ಅಧಿಕಾರವುಳ್ಳವನಾಗಿದ್ದಾನೆ. ಯೇಸುವಿನ ವಿಮೋಚನಾ ಕಾರ್ಯವಿಲ್ಲದೆ ವಾಗ್ದಾನಗಳ ಪೂರ್ಣ ಆಶೀರ್ವಾದಗಳನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲ. ಮತ್ತೆ ಅಬ್ರಹಾಮನು ಹೇಗೆ ನಿತ್ಯ ಜೀವ ಪಡೆಯಲು ಸಾಧ್ಯ? ರಾಜನು ತಾನೇ ನಿತ್ಯಜೀವ ಹೊಂದದೆ, ದಾವೀದನ ಸಿಂಹಾಸನದ ಮೇಲೆ ಒಬ್ಬ ನಿರಂತರ ನೀತಿಯ ರಾಜನು ಆಳುವುದು ಹೇಗೆ? ಕ್ರಿಸ್ತನಲ್ಲದೆ ಯಾರೂ ಈ ಕಾರ್ಯಗಳಿಗೆ ಸಾಕಾಗುವುದಿಲ್ಲ. ಆತನೊಬ್ಬನೇ ದಾವೀದನ ರಾಜಕುವರ, ನೀತಿಯ ಕೊಂಬೆ

ಹಾಗೂ ರಾಜ ಮತ್ತು ಅಮರತ್ವವನ್ನು ಹೊಂದಿರುವವನು. ವಾಗ್ದಾನದ ಶಾಶ್ವತ ಒಡಂಬಡಿಕೆಗೆ ಕ್ರಿಸ್ತನೇ ಮುದ್ರೆಯಾಗಿದ್ದಾನೆ.

ದೇವರ ಪ್ರಕಟನೆಯಲ್ಲಿ ಅವರು ನಂಬಿಕೆಯನ್ನು ಹೊಂದಿದಾಗ ದೇವರ ಮಕ್ಕಳೆಲ್ಲರಿಗೂ ಕ್ರಿಸ್ತನು ಸರ್ವಸ್ವವಾಗಿರುತ್ತಾನೆ. ಸತ್ಯವೇದವು ಸುಂದರವಾಗಿ ತಿಳಿಸಿರುವಂತೆ :

"ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲೇ ದೃಢವಾಗುತ್ತವೆ. ಆದಕಾರಣ ದೇವರ ಪ್ರಭಾವವು ಪ್ರಕಾಶವಾಗುವುದಕ್ಕೋಸ್ಕರ ಆತನ ಮೂಲಕವಾಗಿ ನಾವು ಆಮೆನ್ ಎಂದು ಹೇಳುತ್ತೇವೆ".

(2 ಕೊರಿಂಥ 1:20).

(ಮುಗಿಯಿತು) —ಥಾ. ಚಂದುದಾಸ್

# ಸತ್ಯವೇದದ ಮೂಲ ತತ್ವಗಳು-7

**ವಾಗ್ದಾನದ ಒಡಂಬಡಿಕೆಗಳು**

ದೈವೀಕ ಪ್ರಕಟಣೆಯು ಪೂರ್ಣವಾಗಿ ಆಧಾರಗೊಂಡಿರುವ ಮೂರು ಮಹಾನ್ ವಾಗ್ದಾನದ ಒಡಂಬಡಿಕೆಗಳಿವೆ :

1) ಏದೆನಿನ ವಾಗ್ದಾನ (ಆದಿಕಾಂಡ 3:15).

2) ಅಬ್ರಹಾಮನಿಗೆ ಮಾಡಿದ ವಾಗ್ದಾನ (ಆದಿಕಾಂಡ 12–22 ಅಧ್ಯಾಯ).

3) ದಾವೀದನಿಗೆ ಮಾಡಿದ ವಾಗ್ದಾನ (2 ಸಮುವೇಲ 12:16).

**I ಏದೆನಿನ ವಾಗ್ದಾನ (ಆದಿಕಾಂಡ 3:15)**

1) ಆದಾಮನು ಪಾಪ ಮಾಡಿದ ನಂತರ ಸರ್ಪಕ್ಕೆ ದೇವರು ಹೇಳಿದ ಮಾತುಗಳಲ್ಲಿ ಇದು ಅಡಗಿದೆ.

2) **ಆದಿಕಾಂಡ 3:14 ವಿಶ್ಲೇಶಿಸಿದೆ :**

i) **ಅದರಲ್ಲಿ ಸೇರಿರುವ ವ್ಯಕ್ತಿಗಳು :**

ಸರ್ಪ—ವಿರುದ್ಧ—ಸ್ತ್ರೀ

ಸರ್ಪದ ಸಂತತಿ—ವಿರುದ್ಧ ಸ್ತ್ರೀ ಸಂತತಿ

ii) **ಅವರ ಸಂಬಂಧ : "ಹಗೆತನ" ಅಂದರೆ**

iii) **ಹೋರಾಟದ ಫಲಿತಾಂಶ :**

ಅ) ಸರ್ಪದ ಸಂತತಿ—"ತಲೆಯನ್ನು ಜಜ್ಜುವುದು"
ಅಂದರೆ—ಒಂದು ಖಾಯಂ ಆದ ಹಾಗೂ ಮರಣಾಂತಿಕ ಗಾಯ,

ಆ) **ಸ್ತ್ರೀ ಸಂತತಿ** "ಹಿಮ್ಮಡಿಯನ್ನು ಕಚ್ಚುವುದು"
ಅಂದರೆ—ಒಂದು ತಾತ್ಕಾಲಿಕ ಗಾಯ ಮಾತ್ರ.

3) **ಆದಿಕಾಂಡ 3:15 ವಿವರಿಸಿದೆ.**

i) **ಅಕ್ಷರಶಃ ವಿವರಣೆ :** ಸರ್ಪದ ವರ್ಗವು ಯಾವಾಗಲೂ ಮಾನವರಿಗೆ ಶತ್ರುವಾಗಿರುತ್ತದೆ.

ii) **ಸೂಚಕಾರ್ಥ ವಿವರಣೆ :**

ಅ) "ಸರ್ಪದ ಸಂತತಿ" ಸರ್ಪವು ಮಾಡಿದಂತೆ ಯಾರು ಆಲೋಚಿಸು ತ್ತಾರೋ, ಮಾತನಾಡುತ್ತಾರೋ, ಹಾಗೂ ಕಾರ್ಯ ಮಾಡು ತ್ತಾರೋ ಅಂತಹವರನ್ನು ಇದು ಪ್ರತಿನಿಧಿಸುತ್ತದೆ ; ಅಂದರೆ ದೇವರ ಸತ್ಯವನ್ನು ನಂಬದೆ ಅದನ್ನು ಸುಳ್ಳಾಗಿ ಮಾರ್ಪಡಿಸುವವರು. (ಹೋಲಿಸಿ ಆದಿಕಾಂಡ 3:4-5; ಮತ್ತಾಯ 3:7; 12:34; 23:33; ರೋಮಾಪುರ 8:7; ಯೋಹಾನ 8:44-47).

ಆ) **ಸ್ತ್ರೀಯ ಸಂತತಿ :** ಹವ್ವಳು ಪ್ರಾರಂಭದಲ್ಲಿ ಮಾಡಿದಂತೆ ಸತ್ಯವನ್ನು ಹೇಳುವವರನ್ನು ಪ್ರತಿನಿಧಿಸುತ್ತದೆ. (ಪ್ರಾಮುಖ್ಯವಾಗಿ ಇದು ಕ್ರಿಸ್ತನಿಗೆ ಅನ್ವಯವಾಗುತ್ತದೆ).

ಇ) ಈ ಎರಡೂ ವರ್ಗಗಳ ನಡುವೆ **"ಹಗೆತನದ" ಒಂದು ಸ್ಥಿತಿ** ಅಸ್ತಿತ್ವದಲ್ಲಿರುತ್ತದೆ ಯಾಕಂದರೆ ಅವುಗಳ ಆಲೋಚನೆ ಹಾಗೂ ಜೀವಿತ ತದ್ವಿರುದ್ಧವಾದ ಮಾರ್ಗಗಳಲ್ಲಿರುತ್ತದೆ. ಈ ವೈರತ್ವದಲ್ಲಿ ಸ್ತ್ರೀಯ ಸಂತತಿಯು ತಾತ್ಕಾಲಿಕವಾಗಿ "ಅಶಕ್ತ" ಮಾಡಲ್ಪಡುತ್ತದೆ (ಕಚ್ಚಿದ ಹಿಮ್ಮಡಿ) ಆದರೆ ಅಂತಿಮವಾಗಿ ಆತನು ಪಾಪದ ಶಕ್ತಿಯನ್ನು ನಾಶಪಡಿಸಿ ಜಯಶಾಲಿಯಾಗುತ್ತಾನೆ (ಅದರ ತಲೆಯನ್ನು ಜಜ್ಜುವುದು). ಶಾರೀರಿಕವಾಗಿ ಆಲೋಚಿಸುವವರಿಗೂ ಆತ್ಮೀಕವಾಗಿ

ಆಲೋಚಿಸುವವರಿಗೂ ಮಧ್ಯೆ ವಿರೋಧತ್ವವನ್ನು ರೋಮಾಪುರ 8:5-8 ರಲ್ಲಿ ವಿವರಿಸಿದೆ. ಅವರ ಅಂತಿಮ ಸ್ಥಿತಿಯನ್ನು ಸಹ ಮತ್ತು "ಮರಣ" "ಜೀವ ಮತ್ತು ಸಮಾಧಾನ" ಎಂದು ತಿಳಿಸಿದೆ.

4) **ವಾಗ್ದಾನದ ಉದಾಹರಣೆಗಳು :**

i) **ಅವಿಧೇಯನಾದ ಕಾಯಿನ ಹಾಗೂ ನಂಬಿಗಸ್ತ ಹೇಬೆಲನ ಮಧ್ಯೆ ಹಗೆತನ** (ಆದಿಕಾಂಡ 4:1-8; ಇಬ್ರಿಯ 11:4).

ii) **ಯೇಸುಕ್ರಿಸ್ತನು :** ಕನ್ಯೆಯಲ್ಲಿ ಜನಿಸಿದ್ದರಿಂದ ಸ್ತ್ರೀಯ ಸಂತಾನವಾಗಿದ್ದಾನೆ. ದೇವರು ಆತನ ತಂದೆಯಾಗಿದ್ದನು ಹಾಗೂ ಆತನು ತನ್ನ ತಂದೆಯ ಗುಣಗಳನ್ನು ಪ್ರಕಟಪಡಿಸಿದನು. (ಲೂಕ 1:35; ಯೆಶಾಯ 7:14; ಮತ್ತಾಯ 1:20-23; ಗಲಾತ್ಯ 4:4). ದುಷ್ಟ ಯೆಹೂದ್ಯ ಹಾಗೂ ರೋಮನ್ ಅಧಿಕಾರಿಗಳು ಆತನನ್ನು ವಿರೋಧಿಸಿದರು. ಕಾಯಿನನ ಹಾಗೆ ಅವರು ಸ್ತ್ರೀಯ ಸಂತತಿಯ ವಿರುದ್ಧ ಸಂಚು ಮಾಡಿ, ಆತನನ್ನು ಕೊಂದರು. ಆದಾಗ್ಯೂ ಅದು "ಹಿಮ್ಮಡಿಯನ್ನು ಕಚ್ಚಿ"ದಂತಾಗಿತ್ತು, ಯಾಕಂದರೆ ಮೂರನೆಯ ದಿವಸ ಆತನು ಜೀವಿತನಾಗಿ ಎದ್ದಾಗ, ಅವರ ಮೇಲೆ ಆತನು ಜಯಗಳಿಸಿದನು. ನಾಲ್ವತ್ತು ವರ್ಷಗಳ ನಂತರ ಆ ಅಧಿಕಾರಿಗಳ "ತಲೆಯನ್ನು ಜಜ್ಜಿದನು" ಹೇಗೆಂದರೆ ಕ್ರಿ.ಶ. 70 ರಲ್ಲಿ ರೋಮನ್ ಸೈನ್ಯವು ("ಆತನ ಸೈನ್ಯ") ಯೆಹೂದ್ಯರ ರಾಷ್ಟ್ರೀಯ ಹಾಗೂ ಮತೀಯ ಅಸ್ತಿತ್ವವನ್ನು ನಾಶಪಡಿಸಿ, ಅವರನ್ನು ಚದುರಿಸಿದರು. (ಮತ್ತಾಯ 23:32-39; 22:7; 21:38-44). ತನ್ನ ಶತ್ರುಗಳ ಮೇಲೆ ಯೇಸುವಿನ ಜಯವು ನೆರವೇರಿತು ಯಾಕಂದರೆ ಆತನು ಪಾಪ ಮಾಡಲಿಲ್ಲ. ತನ್ನ ಪ್ರಾಕೃತ ಆಕಾಂಕ್ಷೆಗಳನ್ನು ತುಳಿದು ದೇವರಿಗೆ ವಿಧೇಯನಾಗಲು ಆರಿಸಿಕೊಂಡಿದ್ದರಿಂದ, ಶರೀರದ ಮೇಲೆ ಆತನು ಜಯಹೊಂದಿದನು. ಶಿಲುಬೆಯ ಮೇಲೆ ಮರಣ ಹೊಂದುವ ಮಟ್ಟಕ್ಕೂ ಆತನು ದೇವರಿಗೆ ವಿಧೇಯನಾಗಿದ್ದನು. ಹೀಗೆ "ಆತ್ಮವು" "ಶರೀರದ" ಮೇಲೆ ಜಯ ಹೊಂದಿದ್ದು "ನನ್ನ ಚಿತ್ತವಲ್ಲ ನಿನ್ನ ಚಿತ್ತದಂತಾಗಲಿ" ಎಂಬುದೇ ಯೇಸುವಿನ ಜೀವಿತದ ನಿಯಮವಾಗಿತ್ತು. ದೇವರು ಅವನನ್ನು ಸತ್ತವರೊಳಗಿಂದ ಎಬ್ಬಿಸಿ ಆತನಿಗೆ ಜಯ ಕೊಟ್ಟನು. (ಲೂಕ 22:42, ಅ. ಕೃ. 2:23-24, ರೋಮಾಪುರ 6:9-10 8:3 ಇಬ್ರಿಯ 2:14).

iii) **ಸಭೆ ವಿರುದ್ಧ ಲೋಕ :** (ಯಾ ಕೊ ೧ ಬ 4:4, ರೋಮಾಪುರ 16:17-20. ಎಫೆಸ 6:11-12).

**iv) ಮಾನವರ ರಾಜ್ಯಗಳನ್ನು ದೇವರ ರಾಜ್ಯವು ನಾಶಪಡಿಸುತ್ತದೆ:**

(ದಾನಿಯೇಲ 2:44, ಪ್ರಕಟನೆ 11:15-18, 20:1-4, ಕೀರ್ತನೆ 2:1-9).

ಅ) ಎದುರು ಬೀಳುವ ಜನಾಂಗಗಳನ್ನು ನಾಶಪಡಿಸಿದಾಗ,

ಆ) ಅಂತಿಮ ನ್ಯಾಯ ತೀರ್ಪಿನಲ್ಲಿ ಪುನರುತ್ಥಾನ ಹೊಂದಿದ ಅನೀತಿವಂತರನ್ನು ನಾಶಪಡಿಸಿದಾಗ, (ಪ್ರಕಟನೆ 20),

1000 ವರ್ಷಗಳ ಆಳ್ವಿಕೆಯ ಅಂತ್ಯದಲ್ಲಿ ಪಾಪದ ಶಕ್ತಿಯನ್ನು ಸಂಪೂರ್ಣವಾಗಿ ನಾಶಪಡಿಸಲಾಗುತ್ತದೆ.

**ಆದಿಕಾಂಡ 3:15 :** "ನಿನಗೂ ಈ ಸ್ತ್ರೀಗೂ ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ". ದೇವರು ಎರಡು ಸಂತಾನಗಳ ಮಧ್ಯೆ ಹೋರಾಟವನ್ನು ಪ್ರವೇಶ ಮಾಡಿಸಿದನು. "ಹಗೆತನ" ಶತ್ರುತ್ವ, ವೈರ. "ಶರೀರ ಭಾವದವುಗಳ ಮೇಲೆ ಮನಸ್ಸಿಡುವುದು ದೇವರಿಗೆ ಶತ್ರುತ್ವವು, ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವುದೂ ಇಲ್ಲ, ಒಳಪಡುವುದಕ್ಕಾಗುವುದೂ ಇಲ್ಲ. ಶರೀರ ಭಾವಾಧೀನರು ದೇವರಿಗೆ ಮೆಚ್ಚುಗೆಯಾಗಲಾರರು". (ರೋಮಾಪುರ 8:58). "ನಿನ್ನ (ಸರ್ಪದ)ಸಂತಾನ" —ಯಾರು ಶರೀರ ಭಾವದ ರೀತಿಯಲ್ಲಿ ಆಲೋಚಿಸುತ್ತಾರೋ ಹಾಗೂ ಸತ್ಯವನ್ನು ಸುಳ್ಳಾಗಿ ಮಾರ್ಪಡಿಸುತ್ತಾರೋ ಅಂತಹವರು. (ಮತ್ತಾಯ 3:7-12,34, 23,33, ರೋಮಾಪುರ 8:7, ಯೋಹಾನ 8:44-47).

(ಮುಂದುವರಿಯುವುದು.)

ಭಾ. ಜೆಂಡುದಾಸ್